ಶ್ರೀ ಎಚ್. ಡಿ. ದೇವೇಗೌಡ.—ನಾನು ಏನು ಹೇಳಿದೆ ಅಂದರೆ, ಈ ಸಭೆಗೆ ಜನರು ಬರತಕ್ಕ ಕಾಲದಲ್ಲಿ ಕೆಲವು ನಿಯಮಗಳು ಇವೆ. ಆವರು ಕೋಲು, ಪುಸ್ತಕ ಯಾವುದೂ ತೆಗೆದುಕೊಂಡು ಬರ ಬಾರದು. ನಾಳೆ ನೀವು ವಿಸಿಟರ್ಸ್ ಚಪ್ಪಲಿ ನಹ ಹೊರಗೆ ಇಟ್ಟು ಬರಬೇಕೆಂದು ಹೇಳುವದಕ್ಕೆ ಬರುತ್ತದೆ.

ಅಧ್ಯಕ್ಷರು.—ತಾವು ಅಷ್ಟು ಭಾವೋದ್ರಿಕ್ತರಾಗುವುದಕ್ಕೆ ಕಾರಣವಿಲ್ಲ. ನಾನು ಅದನ್ನು ತರಿಸಿ ಓದಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ತಾವು ವಿರೋಧ ಪಕ್ಷದ ನಾಯಕರಿಗೆ ಚಪ್ಪಲಿಯಲ್ಲಿ ಹೊಡೆಸಿ ಕೊಳ್ಳುವ ಶಬ್ದ ಅಪ್ಯಾಯಮಾನವಾಗಿದ್ದರೆ ಅದು ಇದ್ದುಕೊಳ್ಳಲಿ ಎಂದು ಹೇಳಿದ್ದೀರಿ. ಸಭಾ ನಾಯಕರು ಅನೇಕ ಸಲ... .....

ಶ್ರೀ ವಾಟಾಳ್ ನಾಗರಾಜ್. - ಆವತ್ತು ಪದ ಬಳಸಿದ್ದಕ್ಕೂ ಇವತ್ತು ದೇವೇಗೌಡರು ಮಾತನಾಡಿದ್ದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಮುಖ್ಯಮಂತ್ರಿಯವರ ಮೇಲೆ ಏನಾದರೂ ಮಾಡಬಹುದು; ಅಥವಾ ನನ್ನ ಮೇಲೆ ಏನಾದರೂ ಮಾಡಬಹುದು; ಎಂದು ಹೇಳಿದ್ದಾರೆ. ಆದರೆ ಇವತ್ತಿನ ಮಾತಿಗೂ ಆವತ್ತಿನ ಮಾತಿಗೂ ಬಹಳ ವ್ಯತ್ಯಾಸ ಇದೆ.

ಅಧ್ಯಕ್ಷರು.—ಅದನ್ನು ತೆಗೆಸಿ ಓದುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಈ ವಿಚಾರವನ್ನು ಪೂರ್ತಿಯಾಗಿ ಬಿಟ್ಟು ಬಿಡೋಣ.

Nomination to the Taluk Boards

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ಇವತ್ತು ಬೆಳಿಗ್ಗೆ ರೂಲ್ 312 ಪ್ರಕಾರ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೇನೆ. ಅದರಲ್ಲಿ ತಾಲ್ಲೂಕು ಬೋರ್ಡು ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಕೆಲವು ವಿಚಾರವನ್ನು ಸರ್ಕಾರದಿಂದ ತಿಳಿಯಲು ಅಪೇಕ್ಷೆ ಪಟ್ಟಿದ್ದೇನೆ.

ಅಧ್ಯಕ್ಷರು —ಅದು ಈಗ ತಾನೇ ಬಂದಿದೆ. ಇನ್ನೂ ನಾನು ಪುಟ್ಟಸ್ವಾಮಿಯವರು ಹೇಳಿದ್ದಕ್ಕೆ ರೂಲಿಂಗ್ ಕೊಟ್ಟಿಲ್ಲ.

Ill-treatment to the Satyagrahis in Bidar

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿಮಗೆ ಎರಡು ಕಾಗದಗಳನ್ನು ಕಳಿಸಿದ್ದೇನೆ· ಅದು ಬೀದರಿನಲ್ಲಿ ಸತ್ಯಾಗ್ರಹಿಗಳನ್ನು ಅರೆಸ್ಟ್ ಮಾಡಿದ ವಿಚಾರದಲ್ಲಿ. ಅಲ್ಲಿ ಬಂದಿಖಾನೆಯಲ್ಲಿ ಇರ್ ಟ್ರೀಟ್ ಮಾಡಿದ್ದಾರೆ ಎಂಬುದರ ಬಗ್ಗೆ ಫೋನ್ ಮೆಸೇಜ್ ಬಂದಿದೆ. ಅದನ್ನು ಮುಖ್ಯಮಂತ್ರಿಯ ಹರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅದನ್ನು ಅವರಿಗೆ ನಾನ ತಿಳುಹಿಸುತ್ತೇನೆ.

Budget Estimates for 1973-74 (General Discussion)

Debate continued.

ಶ್ರೀ ಪಿ.ಪುಟ್ಟಸ್ವಾಮಿ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ ನಾನು ನಿನ್ನೆ ಪ್ರಾರಂಭ ಮಾಡಿದ ಭಾಷಣವನ್ನು ಈ ದಿವಸ ಮುಂದುವರಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ, ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ತಿಮ್ಮಪ್ಪನವರು ನಿನ್ನೆಯ ದಿವಸ ನಮ್ಮ ಪಕ್ಷದ ಚುನಾವಣೆಯ ಫೋನ್ಸರ್ ತಂದು ಅದರಲ್ಲಿ ಮುದ್ರಿತವಾದ ಘೋಷಣೆಗಳು ಏನಿವೆ, ಅವನ್ನು ಕಾರ್ಯಗತ ಮಾಡಿಲ್ಲ